ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ. 387/2025

| | | |
|---|---|---|
| ಹೆಸರು | : ಲೋಕೇಶ್.ಬಿ.ಎಸ್ | ಪಿಡಬ್ಲ್ಯೂ-1 |
| ಗಂಡನ ಹೆಸರು | : ಪೌತಿ ಬಾಲಪ್ಪ.ಕೆ | ಸಿಡಬ್ಲ್ಯೂ-1 |
| ವಯಸ್ಸು | : 49 ವರ್ಷ | |
| ವೃತ್ತಿ | : ಅಬಕಾರಿ ನಿರೀಕ್ಷರು | |
| ವಾಸ ಸ್ಥಳ | : ಮೈಸೂರು | |

ದಿಃ11.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.ಸಿ

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ದಿನಾಂಕ ಫೆಬ್ರುವರಿ 2022 ರಿಂದ ಸೆಪ್ಟೆಂಬರ್ 2025ರ ತನಕ ಅಬಕಾರಿ ನಿರೀಕ್ಷಕನಾಗಿ ಸೋಮವಾರಪೇಟೆ ವಲಯ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ದಿನಾಂಕ 16.01.2025 ರಂದು ಸಮಯ ಬೆಳಿಗ್ಗೆ 5.00 ಗಂಟೆ ಸಮಯದಲ್ಲಿ ರಾತ್ರಿ ಪಾಳಿ ಕರ್ತವ್ಯದಲ್ಲಿದ್ದ ಚಾಸಾ 4 ರವರಿಗೆ ದೂರವಾಣಿ ಕರೆಯಲ್ಲಿ ವ್ಯಕ್ತಿಯೊಬ್ಬರು ದೊಡ್ಡ ತೋಳೂರು ಗ್ರಾಮದ ವಿರುಪಾಕ್ಷ ಆನಂದ ಮತ್ತು ಮಾದಪ್ಪ ಎಂಬುವವರು ಅಕ್ರಮವಾಗಿ ಕಳ್ಳಬಟ್ಟಿ ತಯಾರಿಸುತಿತದ್ದಾರೆ ಎಂಬ ಮಾಹಿತಿ ನೀಡಿರುತ್ತಾರೆ. ಸದರಿ ವಿಷಯವನ್ನು ದೂರವಾಣಿ ಮೂಲಕ ನನಗೆ ತಿಳಿಸಿ ಲಿಖಿತವಾಗಿ ದೂರನ್ನು ನೀಡಿರುತ್ತಾರೆ. ನಾನು ಸಮಯ 5.45 ಗಂಟೆಗೆ ನಮ್ಮ ಸಿಬ್ಬಂದಿಗಳನ್ನು ಮುರು ತಂಡಗಳಾಗಿ ವಿಂಗಡಿಸಿ ಇಲಾಖಾ ವಾಹನ ಮತ್ತು ದ್ವಿಚಕ್ರ ವಾಹನದಲ್ಲಿ ಸದರಿ ಗ್ರಾಮಕ್ಕೆ ತೆರಳಿ ಬೇರೆ ಬೇರೆ ತಂಡವಾಗಿ ಶ್ರೀ ವಿರುಪಾಕ್ಷ ಎಂಬುವವರ ಮನೆಯ ಹತ್ತಿರ ಬಂದು ನಮ್ಮ ತಂಡ ಅಲ್ಲಿ ಬಸ್ ನಿಲ್ದಾಣದ ಬಳಿ ನಿಂತಿದ್ದ ಒಬ್ಬ ವ್ಯವಿಕ್ತಿಯನ್ನು ತಾವು ಬಂದ ವಿಚಾರವನ್ನು ತಿಳಿಸಿ ಪಂಚರಾಗಿ ಬರಬೇಕೆಂದು ಕೇಳಿಕೊಂಡಾಗಿ ನಿರಾಕರಿಸಿರುತ್ತಾರೆ. ಅಂತೆಯೇ ವಿರುಪಾಕ್ಷ ರವರ ಅಣತಿ ದೂರದಲ್ಲಿದ್ದ ಮನೆಗೆ ತೆರಳಿ ಒಬ್ಬ ವ್ಯಕ್ತಿಯಲ್ಲಿ ನಾವುಗಳು ಬಂದ ವಿಚಾರವನ್ನು ತಿಳಿಸಿ ಪಂಚರಾಗಿ ಬರ ಬೇಕೆಂದು ಕೇಳಿದಾಗ ಅವರು ನಿರಾಕರಿಸಿರುತ್ತಾರೆ.

2. ನಂತರ ಇಲಾಖಾ ಸಿಬ್ಬಂದಿಗಳನ್ನು ಪಂಚರಾಗಿ ಮಾಡಿಕೊಂಡು ಸದರಿಯವರ ಮನೆಗೆ ಬಂದು ಮನೆಯ ಸಿಮೆಂಟ್ ಸೀಟ್ ನಿಂದ ಕೂಡಿದ್ದು ಯಾವುದೇ ಬಣ್ಣವನ್ನು ಹೊಂದಿರದೆ ವಿದ್ಯುತ್ ಮೀಟರ್ ನ್ನು ಅಳವಡಿಸಿದ್ದು ಅದರಲ್ಲಿ ಆರ್ .ಆರ್ ಸಂಖ್ಯೆ

ನಮೂದಿಸಿರುವುದಿಲ್ಲ. ನಂತರ ಮನೆಯ ಬಾಗಿಲ ಬಳಿ ತಿಳಿಕೇಸರಿ ಟೀಶರ್ಟ್ ಧರಿಸಿದ್ದ ವ್ಯಕ್ತಿಯನ್ನು ವಿಚಾರಿಸಿದಾಗ ತಾನು ವಿರುಪಾಕ್ಷ ಎಂದು ತಿಳಿಸಿರುತ್ತಾರೆ. ಮಾನ್ಯ ಘನ ನ್ಯಾಯಾಲಯದಿಂದ ಶೋದನ ಸಮಚ್ಚಿತ ವಾರೆಂಟ್ ಪಡೆಯಲು ಸಮಾಯಾವಕಾಶ ಇಲ್ಲದ ಕಾರಣ ಸ್ಥಳದಲ್ಲೇ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶೋಧನ ಸಮಚ್ಚಿತ ವಾರಂಟನ್ನು ತಯಾರಿಸಿ ನಾವುಗಳು ಬಂದ ವಿಷಯವನ್ನು ವ್ಯಕ್ತಿಗೆ ತಿಳಿಸಿ ಶೋಧನೆ ಮಾಡಲು ಸಹಕರಿಸುವಂತೆ ಕೇಳಿಕೊಂಡಾಗ ಒಪ್ಪಿರುತ್ತಾರೆ. ಪಂಚರೊಂದಿಗೆ ಮನೆಯನ್ನು ಶೋಧಿಸಿ ನಂತರ ಅಡುಗೆ ಕೋಣೆಯ ಸ್ಲಾಬ್ ಕೆಳಗೆ ಪರಿಶೀಲಿಸಿದಾಗ 750 ಎಮ್. ಎಲ್ 5 ಗಾಜಿನ ಬಾಟಲ್ಗಳು ದ್ರಾವಣ ತುಂಬಿರುವುದು ಕಂಡುಬಂದಿರುತ್ತದೆ. ಅವುಗಳನ್ನು ಹೊರತೆರೆದು ಪರಿಶೀಲಿಸಿದಾ ಅದರಲ್ಲಿ ತುಂಬಿರುವುದು ಕಳ್ಳಬಟ್ಟಿಯೆಂದು ಕಂಡುಬಂದಿರುತ್ತದೆ. ಅದರಲ್ಲಿ ಒಂದು ಬಾಟಲಿಯಲ್ಲಿ ಸುಮಾರು 550 ಎಮಿ ಎಲ್ ಹಾಗೂ ಇನ್ನುಳಿದ 4 ಬಾಟಲಿಯಲ್ಲಿ 750 ಎಮ್ ಎಲ್ ಕಳ್ಳಬಟ್ಟಿ ಕಂಡುಬಂದಿರುತ್ತದೆ. ಅದರ ಪಕ್ಕದಲ್ಲಿ ಸುಮಾರು 20 ಲೀಟರ್ ಸಾಮಾರ್ಥ್ಯದ ಬಿಳಿ ಬಣ್ಣದ ಬಕೆಟ್ ಇರುವುದು ಕಂಡುಬಂದಿರುತ್ತದೆ. ಅದನ್ನು ಹೊರ ತೆಗೆದಾಗ 20 ಲೀಟರ್ ಪುಳಿಗಂಜಿ ಕಂಡುಬಂದಿರುತ್ತದೆ. ಅಂತೆಯೇ 50 ಲೀಟರ್ ಸಾಮರ್ಥ್ಯದ ಅಲ್ಯುಮೀನಿಯಂ ಅಂಡೆ ಹಾಗೂ 5 ಲೀಟರ್ ಸಾಮಾರ್ಥ್ಯದ ತಳರಂದ್ರುವಿರುವ ಅಲ್ಯುಮೀನಿಯಂ ಪಾತ್ರೆ ಕಂಡುಬಂದಿರುತ್ತದೆ.

3. ಇವುಗಳನ್ನು ವಶಕ್ಕ ಪಡೆದು 5 ಕಳ್ಳಬಟ್ಟಿಯಿರುವ ಬಾಟಲಿಗಳಿಂದ ತಲಾ 180 ಮಿಲಿ ಲೀಟರ್ ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ಹಾಗೂ 20 ಲೀಟರ್ ಪುಳಿಗಂಜಿಯಿಂದ 180 ಮಿಲಿ ಲೀಟರ್ ತೆಗೆದು ಮುಚ್ಚಳದಿಂದ ಬಿಗಿದು ದಾರದಿಂದ ಬಟ್ಟೆ ಸುತ್ತಿ ಇಲಾಖಾ ಸೀಲನ್ನು ಮಾಡಲಾಗಿರುತ್ತದೆ.ಸ್ಥಳದಲ್ಲಿ ಮಾದರಿ ಮೊಹರು, ಮಾದರಿ ಚೀಟಿಯನ್ನು ತಯಾರಿಸಿ ಮತ್ತು ಪಂಚರ ಸಹಿ ಪಡೆದು ಎಲ್ಲಾ ಮುದ್ದೆ ಮಾಲುಗಳಿಗೆ ಅಂಟಿಸಲಾಯಿತು. ಮಹಜರನ್ನು ಸ್ಥಳದಲ್ಲಿ ಸುಮಾರು 7.00 ಗಂಟೆಯಿಂದ 8.30 ರವರೆಗೆ ಮಹಜರ್ ಮಾಡಲಾಯಿತು. ಆರೋಪಿಗೆ ನೋಟಿಸ್ ನೀಡಿ ನಂತರ ಠಾಣೆಗೆ ಬಂದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಎಲ್ಲಾ ದಾಖಲಾತಿಗಳನ್ನು ಮಾನ್ಯ ಘನ ನ್ಯಾಯಾಲಯಕ್ಕ ಸಲ್ಲಿಸಲಾಯಿತು. ದಾಳಿ ಸಂದರ್ಭದ ಹಾಗೂ ಮಹಜರ್ ಪ್ರಕ್ರಿಯೆ ಫೋಟೋಗಳು ಮತ್ತು ವೀಡಿಯೋಳನ್ನು ಸಿಡಿ ತಯಾರಿಸಿ ಹಾಗೂ ಫೋಟೋ ಪ್ರಿಂಟ್ ತೆಗೆದು ಮುಂದಿನ ತನಿಖೆಗೆ ಚಾಸಾ 8 ರವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ.

ದೂರನ್ನು ನಿಪಿ.1 , ಸಾಕ್ಷಿಯ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು, ಎಫ್ ಐಆರ್ ನಿಪಿ.2, ಸಾಕ್ಷಿಯಿ ಸಹಿ ನಿಪಿ 2(ಎ),ಶೋಧನಾ ಸಮಚ್ಚಿತ ಆಧಾರವನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ), ಮಹಜರನ್ನು ನಿಪಿ.4 ಮತ್ತು ಸಾಕ್ಷಿಯ ಸಹಿ ನಿಪಿ 4(ಎ) ಮಾದರಿ ಮೊಹರನ್ನು ನಿಪಿ.5, ಮತ್ತು ತನ್ನ ಸಹಿಯನ್ನು ನಿಪಿ 5(ಎ), ಫೋಟೋ

ನಿಪಿ.6 ರಿಂದ 8, ಭಾರತ ಸಾಕ್ಷ್ಯ ಅಧಿನಿಯಮ ದೃಢೀಕರಣ ಪತ್ರ ನಿಪಿ.9, ಸಾಕ್ಷಿಯ ಸಹಿಯನ್ನು ನಿಪಿ.9(ಎ), ಸಿಡಿ ನಿಪಿ.10 ಎಂದು ಗುರುತಿಸಲಾಯಿುತು. ಮಾದರಿಗಾಗಿ ತೆರೆದ ಕಳ್ಳಭಟ್ಟಿ ಸಾರಾಯಿ 5 ಬಾಟಲ್ ಗಳನ್ನು ಒಟ್ಟಾಗಿ ಎಂ.ಓ 1 ಎಂದು, ಒಂದು ಗಾಜಿನ ಬಾಟಲಿನಲ್ಲಿ ಮಾದರಿಗೆ ತೆಗೆದ ಬೆಲ್ಲದ ಪುಳಗಂಜಿಯನ್ನು ಎಂ.ಓ 2, ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಶ್ರೀ. ಸಿ.ವಿ.ಟಿ ವಕೀಲರಿಂದ:</u>

ನನಗೆ ಮಾಹಿತಿ ಬಂದಾಗ ನಾನು ಸೋಮವಾರ ಪೇಟೆಯಲ್ಲಿದ್ದೆ. ಘಟನಾ ಸ್ಥಳಕ್ಕೆ 7.00 ಗಂಟೆಗೆ ಹೋಗಿರುತ್ತೇನೆ. ನಾನು ಇಲ್ಲಿಂದ ಸುಮಾರು 5.45 ಗಂಟೆಗೆ ಘಟನಾ ಸ್ಥಳಕ್ಕೆ ಹೋದೆ. ಅಲ್ಲಿಂದ ಘಟನಾ ಸ್ಥಳಕ್ಕೆ ಸುಮಾರು 8 ಕಿ.ಮೀ ಇದೆ. ನಾನು ಘಟನಾ ಸ್ಥಳ ಕ್ಕೆ ಬಂದಾಗ ಸಾರ್ವಜನಿಕರಲ್ಲಿ ಇಬ್ಬರು ಇದ್ದರು. ಆರೋಪಿ ಮನೆ ಪಕ್ಕ ಒಂದೇ ಮನೆ ಇದೆ. ಆರೋಪಿ ಅಕ್ಕ ಪಕ್ಕ ಬೇರೆ ಮನೆ ಇದೆ ಎಂದರೆ ಸುಳ್ಳು. ಮಹಜರ್ ಸಾಕ್ಷಿದಾರರಿಗೆ ನೋಟಿಸ್ ನೀಡಿರುವುದಿಲ್ಲ. ಪುಳಗಂಜಿ ತಯಾರಿಸಿದಂತಹ ಸಾಮಾಗ್ರಿಗಳು ಯಾವುದೇ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಮಾನತುಪಡಿಸಿಕೊಂಡಿರುವಂತಹ ಬಕೆಟ್ ಯಾವ ಕಂಪನಿಗೆ ಸೇರುತ್ತದೆಂದರೆ ಸಾಕ್ಷಿ ಅದರಲ್ಲಿ ನಮೂದು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. 5 ಬಾಟಲ್ ಗಳ ಮೇಲೆ ಯಾವುದೇ ಲೇಬಲ್ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿ ಕಳ್ಳಭಟ್ಟಿ ಮತ್ತು ಪುಳಗಂಜಿಯನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ರಸಾಯನಿಕ ಪರೀಕ್ಷೆಗೆ ಮಧ್ಯವನ್ನು ತೆಗೆದು ಕಳಿಸಿರುವುದಿಲ್ಲ ಎಂದರೆ ಸರಿಯಲ್ಲ ಮತ್ತು ಮಾದರಿ ಮೊಹರನ್ನು ಸಹ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸಮಚ್ಚಿತ ಶೋಧನ ವಾರೆಂಟನ್ನು ಪಡೆದಿರುವುದಿಲ್ಲ ಎಂದರೆಸರಿಯಲ್ಲ. ಆರೋಪಿಗೆ ಮತ್ತು ಮುದ್ದೆ ಮಾಲುಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ